# ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕೋಲಾರ

## ನನ್ನನ್ನೊಮ್ಮೆ ಗಮನಿಸಿ,

## ಒಣಮರದ ಗಿಳಿ

**ತರಗತಿ:10** **ದ್ವಿತೀಯಾ ಭಾಷೆ ಕನ್ನಡ**

I. **ಕೆಳಗಿನ ಪ್ರಶ್ನೆಗಳಿಗೆ ಒಂದೂಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಬೇಡನು ಪ್ರಾಣಿಗಳನ್ನು ಕೊಲಲ್ಲು ಮಾಡುತ್ತಿದ್ದ ಉಪಾಯವೇನು?

   **ಉತ್ತರ:–** ಬೇಡನು ವಿಷ ಸವರಿದ ಬಾಣಗಳನ್ನು ಉಪಯೋಗಿಸುತ್ತಿದ್ದ.

2. ವಿಷದ ಬಾಣವು ಮರಕ್ಕೆ ಏಕೆ ತಗಲಿತು?

   **ಉತ್ತರ:–** ಬೇಡನು ಜಿಂಕೆಗೆ ಬಾಣ ಬಿಟ್ಟ ಅದು ಹಾರಿ ತಪ್ಪಿಸಿಕೊಂಡಿತು, ಆ ಬಾಣ ಮರಕ್ಕೆ ತಗಲಿತು.

3. ವಿಷದ ಬಾಣವು ಮರಕ್ಕೆ ತಗಲಿದ್ದರಿಂದ ಪರಿಣಾಮವೇನು?

   **ಉತ್ತರ:–** ವಿಷದ ಬಾಣವು ಮರಕ್ಕೆ ತಲಿದ್ದರಿಂದ ಆ ಮರ ಒಣಗಿತು, ಹೂ, ಹಣ್ಣು, ನೆರಳು ಇಲ್ಲದಾಯಿತು.

4. ಗಿಳಿಯನ್ನು ಕಂಡು ಇಂದ್ರನಿಗೆ ಆಶ್ವರ್ಯವಾದದ್ದು ಏಕೆ?

   **ಉತ್ತರ:–** ಒಣ ಮರದ ಮೇಲೆ ಕುಳಿತಿರುವ ಗಿಳಿಯನ್ನು ಕಂಡು ಇಂದ್ರನಿಗೆ ಆಶ್ಚರ್ಯವಾಯಿತು.

5. ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿ ಪ್ರಕಟಿಸಿದನು?

   **ಉತ್ತರ:–** ವರವನ್ನು ಕೊಡುವುದರ ಮೂಲಕ ತನ್ನ ಸಂತೋಷವನ್ನು ಪ್ರಕಟಿಸಿದನು.

II. **ಮೂರು –ನಾಲ್ಕು ವಾಕ್ಯದಲ್ಲಿ ಉತ್ತರ ಬರೆಯಿರಿ.**

1. ಸಾಮಾನ್ಯವಾದ ಲೋಕವರ್ತನೆ ಯಾವುದು?

   **ಉತ್ತರ:–** ಸುಖ ಸಂಪತ್ತಿನ ಕಾಲದಲ್ಲಿ ಜೊತೆಗಿದ್ದವರು ಕಷ್ಟ ಕಾಲದಲ್ಲಿ ಅವರ ಜೊತೆಗೆ ಇರುವುದಿಲ್ಲ.

2. ಗಿಳಿಯು ಇಂದ್ರನನ್ನು ಯಾವ ವರ ಕೆಳಿತು?

   **ಉತ್ತರ:–** ಈ ಮರಕ್ಕೆ ಮೊದಲಿನಂತೆ ಹಸಿರಿನಿಂದ ನಳನಳಿಸುವ ಫಲಪುಷ್ಪ ಭಾರದಿಂದ ಬೀಗುವ, ನೆರಳು ಕೊಡುವ ವರವನ್ನು ಕೊಡುವಂತೆ ವರವನ್ನು ಕೇಳಿತು.

III. **ಸಂದರ್ಭದೊಂದಿಗೆ ಸ್ವಾರಸ್ಯವನ್ನು ವಿವರಿಸಿ.**

1. "ಇಂಥಾ ಒಣಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯ"

   **ಉತ್ತರ:–** ಈ ವಾಕ್ಯವನ್ನು ಅ.ರಾ ಮಿತ್ರ ರವರು ಬರೆದಿರುವ ಒಣ ಮರದ ಗಿಳಿ ಪಾಠದಿಂದ ಅರಸಿದೆ.

   ಈ ಮಾತನ್ನು ಇಂದ್ರನು ಗಿಳಿಯ ಹತ್ತಿರಕ್ಕೆ ಬಂದು ಏಕೆ ಈ ಒಣಮರದಲ್ಲಿ ಕುಳಿತ್ತಿದ್ದೀಯ ಎಂದು ಕೇಳುವಾಗ ಈ ಮಾತನ್ನು ಗಿಳಿಗೆ ಹೇಳುತ್ತಾನೆ.

2. "ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ"

   **ಉತ್ತರ:–** ಈ ಮಾತನ್ನು ಗಿಳಿಯು ಇಂದ್ರನಿಗೆ ಹೇಳುತ್ತದೆ.

   ಇಂದ್ರನು ಗಿಳಿಯ ಹತ್ತಿರಕ್ಕೆ ಬಂದು ಮಾತನಾಡುವಾಗ ಗಿಳಿಯ ತತ್ವ ನಿಷ್ಠೆಯನ್ನು ಮೆಚ್ಚಿ ಈ ಗಿಳಿಗೆ ಏನಾದರೂ ವರವನ್ನು ಕೊಡಬೇಕೆಂದು ತಿಳಿದು ಗಿಳಿಯನ್ನು ಕೇಳುತ್ತಾನೆ ಆ ಸಮಯದಲ್ಲಿ ಗಿಳಿ ಈ ಮಾತನ್ನು ಹೇಳುತ್ತದೆ.

IV. **ಅಸಿ–ಮಸಿ–ಕೃಷಿ.**

1. ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ?

   **ಉತ್ತರ:–** ದೇಶದ ಉದ್ಧಾರ ಅಸಿ–ಮಸಿ ಮತ್ತು ಕೃಷಿಯನ್ನು ಅವಲಂಬಿಸಿದೆ ಎಂದು ಹೆಳಿದ್ದಾರೆ.

2. ಅಸಿ–ಮಸಿ ಎಂದರೇನು?

   **ಉತ್ತರ:–** ಅಸಿ ಎಂದರೆ ಯುದ್ಧ ಅಥವಾ ಸೈನಿಕರು, ಮಸಿ ಎಂದರೆ ಸಾಹಿತ್ಯ ರಚನೆ.

3. ಈ ನಾಡಿನ ಬೆನ್ನೆಲುಬು ಯಾರು?

   **ಉತ್ತರ:–** ಈ ನಾಡಿನ ಬೆನ್ನಲುಬು ಕೃಷಿಕರು (ರೈತರು).

4. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದರು?

   **ಉತ್ತರ:–** ರಂಗ ಜಂಗಮ ಎಂದು ಪ್ರಸಿದ್ದರಾಗಿದ್ದರು.

V. ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸಿ.

1. ನಮ್ಮ ದೇಶದ ರಕ್ಷಣಾಪಡೆ ಏಕೆ ಪ್ರಬಲವಾಗಿರ ಬೇಕೆ?

   **ಉತ್ತರ:–** ನಮ್ಮ ದೇಶ ರಕ್ಷಣೆ ಮಾಡುವರು ಸೈನಿಕರು. ಅವರು ಪ್ರಬಲರಾಗಿದ್ದಗ ದೇಶವನ್ನು ರಕ್ಷಣೆ ಮಾಡಲು ಸಾಧ್ಯ, ಇಲ್ಲದಿದ್ದರೆ ಶತ್ರು ರಾಷ್ಟ್ರದವರು ನಮ್ಮನ್ನು ಗುಲಾಮರನ್ನಾಗಿ ಮಾಡಿ ರಾಜ್ಯಭಾರ ಮಾಡುತ್ತಾರೆ.

2. ರೈತರು ಎದುರಿಸುವ ಸಮಸ್ಯೆಗಳಾವುವು?

**ಉತ್ತರ:**– ಮಳೆಯ ಅಭಾವ, ಅತಿವೃಷ್ಠಿ, ಭೂಮಿ ಬರಡಾಗಿರುವುದು ಕಳಪೆ ಬೀಜಗಳು ಬೆಳಗಳಿಗೆ ರೋಗ ರುಜಿನಗಳು, ಕೀಟ ಭಾದೆ, ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ಇಲ್ಲದಿರುವುದು.

3. ಸರ್ವಜ್ಞ ಕವಿ ಕೃಷಿಯ ಬಗ್ಗೆ ಹೇಳಿರುವ ವಚನ ಯಾವುದು?

   **ಉತ್ತರ:**– ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೆ ಮೇಲ, ಮೇಟಿಯಂ ದಾಟಿ ನಡೆದುದಲ್ಲದೆ ದೇಶದ ಆಟವೆ ಕೆಡಗುಂ. ಎಂದು ಹೇಳಿದ್ದಾರೆ.

VI. 8–10 ವಾಕ್ಯಗಳಲ್ಲಿ ಉತ್ತರಿಸಿ.

1. ಕೃಷಿಕ ಈ ನಾಡಿನ ಬೆನ್ನಲುಬು ವಿವರಿಸಿ?

   **ಉತ್ತರ:**– ಒಕ್ಕಲಿಗ ಒಕ್ಕದಿರೆ ಜಗವೆಲ್ಲ ಬಿಕ್ಕುವುದು ಕೃಷಿಕರು ಸತ್ಯಾಗ್ರಹ ಮಾಡಿದರೆ ತಿನ್ನುವುದಕ್ಕೆ ಅನ್ನವಿಲ್ಲ, ರೈತರ ಬೆಳೆಯದೆ ಪ್ರಯೋಗ ಶಾಲೆಯಿಂದ ಆಹಾರವನ್ನು ಸೃಷ್ಠಿಸಲು ಸಾಧ್ಯವಿಲ್ಲ, ರೈತನು ಬೆವರು ಸುರಿಸಿದರೆ ದೇಶಕ್ಕೆ ಅನ್ನ ಇಲ್ಲದಿದ್ದರೆ ಅನ್ನವಿಲ್ಲ, ವ್ಯವಸಾಯವಿಲ್ಲದ್ದರೆ ದೇಶದ ಆಟವೇ ನಡೆಯದು ಆದ್ದರಿಂದಲೇ ಕೃಷಿಕರು ಈ ನಾಡಿನ ಬೆನ್ನಲುಬು.

VII. ಸಂದರ್ಭದೊಡೆನೆ ವಿವರಿಸಿ.

1. "ರೈತರು ನಿರಾಶಾವಾದಿಗಳಾದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ"

   **ಉತ್ತರ:**– ಈ ಮಾತನ್ನು ಪಂಡಿತ್ಯಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬರೆದಿರುವ ಅಸಿ–ಮಸಿ–ಕೃಷಿ ಪಾಠದಿಂದ ಆರಿಸಿ.

   ರೈತರಷ್ಠು ಕಷ್ಟಪಡುವರು ಯಾರು ಇಲ್ಲ, ಅವರಷ್ಟು ತೊಂದರೆ ಅನುಭವಿಸುವರು ಯಾರು ಇಲ್ಲ, ಬೆಳೆ ಬೆಳೆಯ ಬೇಕಾದರೆ ತುಂಬಾ ಕಷ್ಠ ಅನುಭವಿಸುತ್ತಾರೆ, ಆದರೂ ಅವರು ಕೃಷಿಯನ್ನು ಬಿಡುವುದಿಲ್ಲ ಎಂದು ಹೇಳುವಾಗ ಈ ಮಾತು ಬಂದಿದೆ.

2. "ಅವರು ಯಾರಿಗೂ ಮೊಸ ವಂಚನೆ ಮಾಡುವವರಲ್ಲ"

   **ಉತ್ತರ:**– ಈ ಮಾತನ್ನು ಪಂಡಿತ್ಯಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬರೆದಿರುವ ಅಸಿ–ಮಸಿ–ಕೃಷಿ ಪಾಠದಿಂದ ಆರಿಸಿ.

   ರೈತರು ತುಂಬಾ ಕಷ್ಟ ಪಟ್ಟು ಬೆಳೆ ಬರುತ್ತದೆ, ಬೆಳೆದ ಬೆಳೆಗೆ ಬೆಲೆ ಇಲ್ಲದೆ ತುಂಬಾ ಕಷ್ಟ ಪಡುತ್ತಾರೆ, ರೈತರಿಗೆ ವಂಚನೆ ಮಾಡುವವರು ಇದ್ದಾರೆ, ಆದರೆ ರೈತರು ಯಾರಿಗೂ ಮೊಸ–ವಂಚನೆ ಮಾಡುವವರಲ್ಲ ಎಂದು ಲೇಖಕರು ಹೇಳಿದ್ದಾರೆ.

# ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕೋಲಾರ

## ಗಾನ ಯೋಗಿ ಪಂಡಿತ ಪುಟ್ಟರಾಜ ಗವಾಯಿ

### ದ್ವಿತೀಯಾ ಭಾಷೆ ಕನ್ನಡ

**I. ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**1.** ಪುಟ್ಟ ರಾಜರ ತಂದೆ–ತಾಯಿಗಳ ಹೇಸರೇನು?

**ಉತ್ತರ:–** ತಂದೆ ರೇವಣ್ಣಯ್ಯ, ತಾಯಿ–ಸಿದ್ದಮ್ಮ.

**2. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ ?**

**ಉತ್ತರ:–** ಶಿಷ್ಯರ ಮನಸ್ಸನ್ನು ಓದುವ ಶಕ್ತಿ ಇರುತ್ತದೆ.

**3. ತಾಯಿ ಸಿದ್ದಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡುಳು?**

**ಉತ್ತರ:–** ನನ್ನ ಮಗನನ್ನು ಕಳುಹಿಸಿ ಕೊಡಿ ಎಂದು ಬೇಡಿಕೊಂಡಳು.

**4. ಪುಟ್ಟ ರಾಜರು ಖಾದಿ ಧರಿಸಲು ಕಾರಣವೇನು?**

**ಉತ್ತರ:–** ಗಾಂಧಿ ತತ್ವಾನುಯಾಯಿ ಆಗಿದ್ದರಿಂದ ಖಾದಿ ಬಟ್ಟೆ ತೊಡುತ್ತಿದ್ದರು.

**II. 3–4 ವಾಕ್ಯಗಳಲ್ಲಿ ಉತ್ತರಿಸಿ.**

**1.** ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದು ಕೊಂಡಿದ್ದು ಹೇಗೆ?

**ಉತ್ತರ:–** ಪುಟ್ಟರಾಜರು 6 ತಿಂಗಳ ಮಗುವಾಗಿದ್ದಾಗ ಅವರಿಗೆ ಕಣ್ಣು ಕಾಣಿಸಲಿಲ್ಲ ಅಂದರೆ ಪೊರೆ ಬಂದಿತು, ಆಗ ನಾಟಿ ವೈದ್ಯರು ನಾಯಿತಲ್ಲಿರುವ ತೊನಸಿಯನ್ನು ಮುಟ್ಟಿಸಬೇಕೆಂದು ಅದರಂತೆ ಮುಟ್ಟಿಸುವಾಗ ಕೈಯಿಂದ ಜಾರಿ ಕಣ್ಣಿನೊಳಗೆ ಬಿದ್ದು ಕಣ್ಣನ್ನು ಕೊರೆದವು ಹೀಗೆ ಪುಟ್ಟರಾಜರ ಕಣ್ಣುಗಳು ಹೋದವು.

**2.** ಪುಟ್ಟರಾಜ ಗವಾಯಿಗಳು ಯಾವ ಯಾವ ವಿದ್ಯೆಗಳಲ್ಲಿ ನಿಪುಣರಾಗಿದ್ದರು?

**ಉತ್ತರ:–** ಪುಟ್ಟರಾಜರು ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ಶಬ್ದಾನುಶಾಸ್ತ್ರ, ಛಂದಸ್ಸು ಶಾಸ್ತ್ರ, ಕನ್ನಡ ವ್ಯಾಕರಣವನ್ನು ಶಾಸ್ತ್ರಬದ್ದವಾಗಿ ಕಲಿತರು ಮತ್ತು ಬ್ರೈನ್ ಲಿಪಿಯನ್ನು ಕಲಿತು.

**3.** ತಾಯಿ ಸಿದ್ದಮ್ಮ ಪುಟ್ಟರಾಜರನ್ನು ಏನೆಂದು ಆಶಿರ್ವದಿಸಿದಳು?

**ಉತ್ತರ:–** ನಿನ್ನಂಥ ಶ್ರೇಷ್ಠ ಪುತ್ರರತ್ನವೊಂದನ್ನು ಹೆತ್ತ ಭಾಗ್ಯ ನ್ನದಾಗಲಿ, ಹೆಂಡತಿ ಮಕ್ಕಳು ಸಂಸಾರ

ಬಂಧನದಲ್ಲಿ ಬಂಧಿಯಾವುದು ನಿನಗೆ ಇಷ್ಟ ಇಲ್ಲದಿದ್ದರೆ ನನ್ನ ಜೊತೆ ಬರುವುದು ಬೇಡ ಮನಗೆ, ಗುರುಗಳು ತೋರುವ ಮಾರ್ಗದಲ್ಲಿ ನೀನು ನಡೆದು ಅಮರನಾಗು ಕಂದ ಎಂದಳು.

**4.** ಪುಟ್ಟರಾಜರ ವೇಷಭೂಷಣಗಳು ಹೇಗಿದ್ದವು?

**ಉತ್ತರ:–** ಶುಭ್ರವಾದ ಬಿಳಿಯ ಉದ್ದನೆಯ ಅಂಗಿ, ಪಂಚೆ, ತಲೆಗೆ ಕೆಂಪುಪೇಟ, ಹಣೆಯಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಪಾದಗಳಲ್ಲಿ ಮರದ ಚಪ್ಪಲಿಗಳು, ಕೈಯಲ್ಲಿ ಕೋಲು ಇತ್ತು.

**III. ಸಂದರ್ಭ ಸಹಿತ ವಿವರಿ.**

1. "ಅರಿ ಹರಿಯುವುದರ ಬದಲು, ಗುಡ್ಡಿನ ಹರಿದು ಕಣ್ಣು ಹೋಗಿ ಬಿಟ್ಟವು"

**ಉತ್ತರ:–** ಈ ಮಾತನ್ನು ರಮೇಶ್‌ಗೌಡ ಬರೆದಿರುವ ಗಾನಯೋಗಿ ಪುಟ್ಟರಾಜ ಗವಾಯಿಗಳು ಎಂಬ ಪಾಠದಿಂದ ಆರಿಸಿದೆ.

ಪುಟ್ಟರಾಜರು 6ತಿಂಗಳು ಮಗುವಾಗಿದ್ದಾಗ ತೊನಸಿಯಿಂದ ನನ್ನ ಕಣ್ಣುಗಳು ಕುರುದಾದವು ಎಂದು ಹೇಳುವಾಗ ಈ ಮಾತನ್ನು ಪುಟ್ಟರಾಜರೆ ಹೇಳುತ್ತಾರೆ.

2. "ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಂ ಅಲ್ಲ"

**ಉತ್ತರ:–** ಈ ಮಾತನ್ನು ರಮೇಶ್‌ಗೌಡ ಬರೆದಿರುವ ಗಾನಯೋಗಿ ಪುಟ್ಟರಾಜ ಗವಾಯಿಗಳು ಎಂಬ ಪಾಠದಿಂದ ಆರಿಸಿದೆ.

ಚಿಕ್ಕ ಹುಡುಗನಾಗಿದ್ದಾಗ ಪುಟ್ಟರಾಜರು ಮನೆಯಲ್ಲಿ ಯಾರು ಇಲ್ಲದಾಗ ಮಾವ ಚಂದ್ರಶೇಖರರ ಹಾರ್ಮೋನಿಯಂ ಅನ್ನು ತೆಗೆದು ಕೊಂಡು ನುಡಿಸುತ್ತಿದ್ದರು, ಆ ಸಮಯದಲ್ಲಿ ಆಗಮಿಸಿದ ಚಂದ್ರಶೇಖರಯ್ಯನವರು ಪುಟ್ಟಯ್ಯನನ್ನು ತಬ್ಬಿಕೊಂಡು ಈ ಮಾತನ್ನು ಹೇಳುತ್ತಾನೆ.

3. "ಅವನು ಬಂದರೆ ಕರೆದು ಕೊಂಡು ಹೋಗು ತಾಯಿ"

**ಉತ್ತರ:–** ಈ ಮಾತನ್ನು ರಮೇಶ್‌ಗೌಡ ಬರೆದಿರುವ ಗಾನಯೋಗಿ ಪುಟ್ಟರಾಜ ಗವಾಯಿಗಳು ಎಂಬ ಪಾಠದಿಂದ ಆರಿಸಿದೆ.

ಈ ಮಾತನ್ನು ಪಂಚಾಕ್ಷರಿ ಗವಾಯಿಗಳು ಸಿದ್ದಮ್ಮನಿಗೆ ಹೇಳುತ್ತಾರೆ, ಸಿದ್ದಮ್ಮ ಮಗನನ್ನು ತನ್ನ ಮನೆಗೆ ಕರದುಕೊಂಡು ಹೋಗುವುದಾಗಿ ಪಂಚಾಕ್ಷರಿ ಗುರುಗಳಲ್ಲಿ ಬೇಡಿಕೊಳ್ಳುವಾಗ ಈ ಮಾತನ್ನು ಸಿದ್ದಮ್ಮನಿಗೆ ಹೇಳುತ್ತಾರೆ.

4. "ಸಮಾಜದ ಹಣದಿಂದ ನನಗೆ ವಿದ್ಯೆಕೊಟ್ಟಿದ್ದಾರೆ"

**ಉತ್ತರ:–** ಈ ಮಾತನ್ನು ರಮೇಶ್‌ಗೌಡ ಬರೆದಿರುವ ಗಾನಯೋಗಿ ಪುಟ್ಟರಾಜ ಗವಾಯಿಗಳು ಎಂಬ ಪಾಠದಿಂದ ಆರಿಸಿದೆ.

ಪುಟ್ಟರಾಜರ ತಾಯಿ ಗುರುಗಳ ಅಪ್ಪಣೆ ಪಡೆದು ಮಗನನ್ನು ಕರೆದು ಕೊಂಡು ಹೋಗಲು ಪುಟ್ಟರಾಜ ಹತ್ತಿರ ಬಂದು ಬಾ ಮಗನೆ ಊರಿಗೆ ಹೋಗೋಣ ಎಂದಾಗ ಈ ಮಾತನ್ನು ಪುಟ್ಟರಾಜರು ಹೇಳುತ್ತಾರೆ.

# ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕೋಲಾರ

## ಹಕ್ಕಿಗೂಡುಗಳ ನಿಗೂಢ ಜಗತ್ತು

### ದ್ವಿತೀಯಾ ಭಾಷೆ ಕನ್ನಡ

**I.** ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ.

**1.** ಸಸ್ತನಿಗಳ ಆಶ್ರಯದಾಣಗಳು ಯಾವುವು?

**ಉತ್ತರ:–** ಗುಹೆ, ಪೊಟರೆ, ಗೂಡು, ಬಿಲ

**2.** ಅಸ್ಪೃಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಯಾವ ಪಾಠ ಹೇಳುತ್ತವೆ?

**ಉತ್ತರ:–** ಸ್ಪರ್ಶ ಸಂಜೀವಿನಿಯ ಪಾಠ ಹೇಳುತ್ತದೆ.

**3.** ಹಕ್ಕಿ ಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ?

**ಉತ್ತರ:–** ಕಲಾವಿದನ ಸ್ವೋಪಜ್ಞತೆ, ವಿಜ್ಞಾನಿಯ ತಂತ್ರಜ್ಞಾನದ ಸಮನ್ವಯ ಗೊಂಡಿದೆ.

**4.** ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿ ಯೊಡ್ಡುವ ಅಂಶಗಳಾವುವು?

**ಉತ್ತರ:–** ಹಕ್ಕಿಗಳ ದೇಹ ಸ್ವರೂಪ, ಪರಿಸರದ ವೈಲಕ್ಷಣಗಳು, ಬಲಿ ಬೇಟೆ ಸಂಬಂಧಗಳು ಅದರ ಸಾಮರ್ಥ್ಯಕ್ಕೆ ಮಿತಿಯೊಡ್ಡುತ್ತದೆ.

**II.** 3–4 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

**1.** ಹಕ್ಕಿಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಳಿವೆ?

**ಉತ್ತರ:–** ಹಕ್ಕಿಗೂಡಿನಲ್ಲಿ ನೋವಿದೆ, ನಲಿವಿದೆ, ಆಕ್ರಂದನವಿದೆ, ಸಂತಸದ ಧನಿಯಿದೆ, ಕಾವು, ಗುಟುಕು ಪಡೆದು ಜೀವ ಕಣ್ತೆರೆಯುವ ಅಚ್ಚರಿಯಿದೆ.

**2.** ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು?

**ಉತ್ತರ:–** ರಕ್ಷಣೆಗಾಗಿ ಶೀತಗಾಳಿ, ಬಿರುಗಾಳಿ, ಮಳೆ, ಪ್ರವಾಹಗಳ ವಿರುದ್ದ ಬದುಕಲು, ಮರಳಿನ ಹೊಡೆತ, ಬಿಸಿಲು, ಮೊಟ್ಟೆ ಮರಿಗಳನ್ನು ರಕ್ಷಿಸಿಕೊಳ್ಳಲು, ಬೇಟೆ ಗಾರರಿಂದ ತಪ್ಪಿಸಿಕೊಳ್ಳಲು ಸಲುವಾಗಿ ಗೂಡನ್ನು ನಿರ್ಮಿಸುತ್ತದೆ.

3. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟ ಬಲ್ಲವು?

**ಉತ್ತರ:–** ಸಾಗರದ ದ್ವೀಪ, ಗಿರಿ ಶಿಖರ ನೆತ್ತಿ, ಮನುಷ್ಯ ಹೋಗಲಾರದ ನಿಬಿಡ ಪ್ರದೇಶ ಕಗ್ಗತ್ತಲ ಕಣಿವೆ, ಧೃವ ಪ್ರದೇಶದಲ್ಲಿ ಗೂಡು ಕಟ್ಟ ಬಲ್ಲವು.

4. ಹಕ್ಕಿಗಳ ಗೂಡನ್ನು ಹೇಗೆ ಅಲಂಕರಿಸುತ್ತಾನೆ?

**ಉತ್ತರ:–** ಬಣ್ಣದ ಗಾಜಿನ ಚೂರು, ಬಟ್ಟೆಯ ಚಿಂದಿ, ಗಾಲ್ಫ ಚಂಡು, ನೀಲಿ ಶೀಶೆಯ ಚೂರು, ಈರುಳ್ಳಿ ಸಿಪ್ಪೆಗಳಿಂದ ಅಲಂಕರಿಸುತ್ತದೆ.

## III. ಸಂದರ್ಭದೊಡನೆ ವಿವರಿಸಿ.

1. **"**ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಶಾಲೆ ಅದು**"**

**ಉತ್ತರ:–** ಈ ವಾಕ್ಯವನ್ನು ಕೃಪಾಕರ ಮತ್ತು ಸೇನಾನಿ ಬರೆದಿರುವ ಹಕ್ಕಿಗೂಡುಗಳ ನಿಗೂಢ ಜಗತ್ತು ಎಂಬ ಪಾಠದಿಂದ ಆರಿಸಲಾಗಿದೆ.

ಲೇಖಕರು ಗೂಡುಗಳ ಬಗ್ಗೆ ತಿಳಿಸುವಾಗ ಅಂದರೆ ನೋವು, ನಲಿವು,ಅಕ್ರಂದನ ಇತ್ಯಾದಿ ಎಲ್ಲಾ ಇರುವುದರ ಜೊತೆಗೆ ಶಿಸ್ತಾಗಿ ತನ್ನ ಮಕ್ಕಳಿಗೆ ಪಾಠ ಕಲಿಸುತ್ತದೆ ಎಂದು ತಿಳಿಸುವಾಗ ಲೇಖಕರು ಹೇಳುತ್ತಾರೆ.

2. **"**ಇಲ್ಲಿ ವಾಸ್ತು ಶಿಲ್ಪಿಯ ಕಲ್ಪನೆ ಸಾಕರಗೊಳ್ಳುತ್ತದೆ.**"**

**ಉತ್ತರ:–** ಈ ವಾಕ್ಯವನ್ನು ಕೃಪಾಕರ ಮತ್ತು ಸೇನಾನಿ ಬರೆದಿರುವ ಹಕ್ಕಿಗೂಡುಗಳ ನಿಗೂಢ ಜಗತ್ತು ಎಂಬ ಪಾಠದಿಂದ ಆರಿಸಲಾಗಿದೆ.

ಗೂಡು ಹಕ್ಕಿಗಳ ಕುಶಕತೆಗೆ ಹಿಡಿದ ಕನ್ನಡಿ, ಹಕ್ಕಿಗಳಷ್ಟು ಕೌಶಲ್ಯದಿಂದ ಗೂಡು ಕಟ್ಟುವ ಚಾಕಚಕ್ಯತೆ ಬೇರೆ ಯಾವ ಪ್ರಾಣಿಗೂ ಇಲ್ಲ ಎಂದು ತಿಳಿಸುವಾಗ ಈ ಮಾತನ್ನು ಲೇಖಕರು ಹೇಳಿದ್ದಾರೆ.

# ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕೋಲಾರ

## ಕಾಫೀ–ಕಪ್ಪು

## ದ್ವಿತೀಯಾ ಭಾಷೆ ಕನ್ನಡ

**I. ಒಂದೂಂದು ವಾಕ್ಯದಲ್ಲಿ ಉತ್ತರಿಸಿ.**

1. ಹೆಡ್ ಮಾಸ್ಟರರು ಸಂತೋಷಗೊಂಡುದ ಏಕೆ?

   **ಉತ್ತರ:–** ಮನೆಗೆ ಬಂದ ಹಳೆಯ ವಿದ್ಯಾರ್ಥಿಗಳನ್ನು ನೋಡಿ ಹೆಡ್ ಮಾಸ್ಟರಗೆ ಸಂತೋಷವಾಯಿತು.

2. ವಿದ್ಯಾರ್ಥಿಗಳು ಕಫೀ ಕುಡಿಯಲು ಎಂತಹ ಕಪ್ಪುಗಳನ್ನು ಆರಿಸಿಕೊಂಡರು?

   **ಉತ್ತರಗಳು:–** ಬೆಲೆ ಬಾಳುವ ಕಪ್ಪುಗಳನ್ನು ಆರಿಸಿಕೊಂಡರು.

3. ಗುರುಗಳು ಹೇಳಿದಂತೆ ಕಾಫೀ ಮತ್ತು ಕಪ್ಪು ಯಾವುದರ ಪ್ರತೀಕಗಳು?

   **ಉತ್ತರ:–** ಗುರುಗಳು ಹೇಳಿದಂತೆ ಕಾಫೀ ಜೀವನ ಕಪ್ಪು ಐಶ್ವರ್ಯದ ಸಂಖೇತವಾಗಿದೆ.

4. ಗುರುಗಳ ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದ್ದಾರೆ?

   **ಉತ್ತರ:–** ಜೀವನದಲ್ಲಿ ಉತ್ತಮವಾದುದನ್ನೆ ಪಡೆಯ ಬೇಕು ಎನ್ನುವ ಆಸೆಯೇ ದುರ್ದೈವದ ಸಂಗತಿ ಎಂದಿದ್ದಾರೆ.

5. ಗುರುರಾಜ ಕರಜಗಿ ಅವರ ಅಂಕಣ ಶೀರ್ಷಿಕೆ ಯಾವುದು?

   **ಉತ್ತರ:–** 'ಕರುಣಾಳು ಬಾ ಬೆಳಕೆ' ಎಂಬುದು ಅವರ ಅಂಕಣ

**II. 3–4 ವಾಕ್ಯಗಳಲ್ಲಿ ಉತ್ತರಿಸಿರಿ.**

1. ಹಿರಿಯ ವಿದ್ಯಾರ್ಥಿಗಳು ಹೇಗೆ ಮಾಸ್ತರರ ಬಳಿ ಯಾವ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು?

   **ಉತ್ತರ:–** ಹಿರಿಯ ವಿದ್ಯಾರ್ಥಿಗಳು ಎಲ್ಲಾ ಕಡೆ ವ್ಯಾಪಾರ ಕುಸಿಯುತ್ತಿದೆ, ರೂಪಾಯಿ ಬೆಲೆ ಕುಸಿಯುತ್ತಿದೆ, ಹಣಕ್ಕೆ ಬೆಲೆಯೇ ಇಲ್ಲ, ಮಕ್ಕಳು ಬೆಳೆಯುತ್ತಿದ್ದಾರೆ ಅವರನ್ನು ಅರ್ಥಮಾಡಿಕೊಳ್ಳುವುದ ಕಷ್ಟ, ಎಂದು ಹೇಳಿಕೊಳ್ಳುತ್ತಿದ್ದಾರೆ.

**III. ಸಂದರ್ಭ ಸಹಿತ ವಿವರಿಸಿ.**

1. "ಭಗವಂತ ನಿಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ."

   **ಉತ್ತರ:–** ಈ ವಾಕ್ಯವನ್ನು ಗುರುರಾಜ ಕರಜಗಿ ಅವರು ಬರೆದಿರುವ ಕಾಫೀ ಕಪ್ಪು ಎಂಬ ಗದ್ಯದಿಂದ ಆರಿಸಿದೆ.

ಜೀವನದಲ್ಲಿ ನಮಗೆ ಬೇಕಾಗಿರುವುದು ಜೀವನ ಕಪ್ಪಲ್ಲ ಅದರ ಕಪ್ಪು ಎಂನ ಐಶ್ವರ್ಯಕ್ಕೆ ಸಿಲುಕಿ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದೇವೆ ಎಂದು ಹೇಳುವಾಗ ಈ ಮಾತನ್ನು ಹೆಡ್ ಮಾಸ್ಟರ್ ಹೇಳುತ್ತಾರೆ.

2. "ನನ್ನ ಕಾಫೀ ಕೂಡ ತುಂಬ ಚೆನ್ನಾಗಿರುತ್ತದೆ."

**ಉತ್ತರ:–** ಈ ವಾಕ್ಯವನ್ನು ಗುರುರಾಜ ಕರಜಗಿ ಅವರು ಬರೆದಿರುವ ಕಾಫೀ ಕಪ್ಪು ಎಂಬ ಗದ್ಯದಿಂದ ಆರಿಸಿದೆ.

ಹಳೆಯ ವಿದ್ಯಾರ್ಥಿಗಳು ನನಗೆ ಬಂದಾಗ ಗುರುಗಳು ತುಂಬಾ ಸಂತೋಷದಿಂದ ಬರ ಮಾಡಿಕೊಂಡು ನಮ್ಮವಳು ತೀರಿಕೊಂಡು ಸುಮಾರು ವರ್ಷಗಳಾಯಿತು, ನೀವು ಕುಳಿತು ಕೊಳ್ಳಿ ನಾನು ಕಫೀ ಮಾಡಿಕೊಂಡು ಬರುತ್ತೇನೆ ಎಂದು ಹೇಳುವಾಗ ಈ ಮಾತನ್ನು ಗುರುಗಳು ಹೇಳುತ್ತಾರೆ.

# ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕೋಲಾರ

## ನನ್ನ ಗೋಪಾಲ

## ದ್ವಿತೀಯಾ ಭಾಷೆ ಕನ್ನಡ

**I. ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ಗೋಪಾಲನ ಬೆಳಗಿನ ಮುಖ್ಯ ಕೆಲಸವೇನು?

   **ಉತ್ತರ:–** ಸ್ನಾನ ಮಾಡಿ ಶಾಲೆಗೆ ಹೋಗುವುದು.

2. ಗೋಪಾಲನಿಗೆ ಬಣ್ಣ–ಬಣ್ಣದ ಹೂಗಳು ಹೇಗೆ ಕಂಡವು?

   **ಉತ್ತರ:–** ಕಾಮನ ಬಿಲ್ಲಿನಂತೆ ಕಂಡವು.

3. ಗೋಪಾಲನ ಗೆಳೆಯರು ಯಾರು?

   **ಉತ್ತರ:–** ರಾಮು, ನಾಣಿ, ಕಿಟ್ಟಿ, ಮಾಧು.

4. ಬನದ ಗೋಪಾಲ ಯಾರು? ಕಾಡಿನಲ್ಲಿ ಅವನ ಕೆಲಸವೇನು?

   **ಉತ್ತರ:–** ಬನದ ಗೋಪಾಲ ಕೃಷ್ಣ, ಕಾಡಿನಲ್ಲಿ ದನ ಕಾಯೋದು ಅವನ ಕೆಲಸ.

**II. 3–4 ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ಮಲಗಿದ್ದ ಗೋಪಾಲನ ತಾಯಿಯು ಯಾವ ಮಾತುಗಳಿಂದ ಎಳಿಸಿದಳು?

   **ಉತ್ತರ:–** ಗೋಪಾಲ ಬೆಳಗಾಯ್ತು ಮೇಲೆಳು, ಸೂರ್ಯ ಹುಟ್ಟಿ ಮೇಲೆ ಬರುತ್ತಿದ್ದಾನೆ, ಹಕ್ಕಿಗಳು ಹಾಡುತ್ತಾ ಹಾರಾಡಿ ಕರೆಯುತ್ತಿವೆ, ನಿನ್ನ ಹೂಗಳು ಅರಳಿ ಬನದಲ್ಲಿ ನಿನಗಾಗಿ ಕಾದುಕೊಂಡಿವೆ, ಎಂದು ಎಳಿಸುತ್ತಾಳೆ.

2. ಬನದ ಗೋಪಾಲನ ವೇಷ ಭೂಷಣಗಳು ಹೇಗಿದ್ದವು?

   **ಉತ್ತರ:–** ತಲೆಯ ಮೇಲೆ ಸಣ್ಣದೊಂದು ಕಿರೀಟ, ನವಿಲುಗರಿ, ಕೈಯಲೊಂದು ಕೊಳಲು ಇತ್ತು.

**III. 8–10 ವಾಕ್ಯಗಳಲ್ಲಿ ಉತ್ತರಿಸಿ.**

1. ನನ್ನ ಗೋಪಾಲ ಪಾಠದಲ್ಲಿ ಪ್ರಕೃತ್ತಿಯನ್ನು ಹೇಗೆ ವರ್ಣಿಸಲಾಗಿದೆ?

   **ಉತ್ತರ:–** ಕಾಡಿನಲ್ಲಿ ಮಲ್ಲಿಗೆಯ ಹೂವು ಕೇದಗೆಯ ಹೂವು, ಸಂಪಿಗೆ ಹೂವು, ಪರ್ವತ ಬಾಳೆ ಹೂವು, ಗೋರೆಂಟಿಯ ಹೂವು ಎಲ್ಲಾ ಬಣ್ಣಗಳು ಸೇರಿ ಮಳೆ ಬಿಲ್ಲಿನಂತೆ ಕಾಣುತ್ತಿದ್ದವು, ಹಕ್ಕಿಗಳ ಚಿಲಿಪಿಲಿ ಗಾನ ಮುಂತಾದವುಗಳನ್ನು ಕಾಣಬಹುದು ತೆಂಗು ಮರಗಳಲ್ಲಿ ಸೂರ್ಯನ ಕಿರಣಗಳು ಇತ್ಯಾದಿ.

**IV.** ಸಂದರ್ಭ ಸಹಿತ ವಿವರಿಸಿ.

1. **"**ಸಾವಿರ ಮಳೆ ಬಿಲ್ಲುಗಳು ಸೇರಿ ಕುಣಿದಂತೆ ತೊರುತ್ತಿತ್ತು.**"**

   **ಉತ್ತರ:–** ಈ ವಾಕ್ಯವನ್ನು ಕುವೆಂಪು ರವರು ಬರೆದಿರುವ ನನ್ನ ಗೋಪಾಲ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

   ಕಾಡಿನಿಂದ ಮನೆಗೆ ಬಂದ ಗೋಪಾಲನನ್ನು ತಾಯಿ ಎಲ್ಲಿ ಹೋಗಿದ್ದೆ ಎಂದು ಪ್ರಶ್ನಿಸುತ್ತಾಳೆ, ಆ ಸಮಯದಲ್ಲಿ ಈ ಮಾತನ್ನು ಹೇಳುತ್ತಾನೆ.

2. **"**ಅಮನ್ನ ಮಾತು, ಸುಳ್ಳಾಗಲಾರದು.**"**

   **ಉತ್ತರ:–** ಈ ವಾಕ್ಯವನ್ನು ಕುವೆಂಪು ರವರು ಬರೆದಿರುವ ನನ್ನ ಗೋಪಾಲ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

   ಈ ಮಾತನ್ನು ಗೋಪಾಲನು ಶಾಲೆಯಿಂದ ಮನೆಗೆ ಬರುವಾಗ ತಾಯಿ ಹೇಳಿದಂತೆ ಬನದ ಗೋಪಾಲನನ್ನು ಕರೆಯುತ್ತಾನೆ, ಆಗ ಬರುವುದಿಲ್ಲ ಆಗ ಈ ಮಾತನ್ನು ಗೋಪಾಲನು ಹೇಳುತ್ತಾನೆ.

# ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕೋಲಾರ

## ಪದ್ಯಭಾಗ

## ಏಣಿ

## ದ್ವಿತೀಯಾ ಭಾಷೆ ಕನ್ನಡ

**I. ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ಏಣಿ ಜನರಿಗೆ ಮಾಡಿದ ಉಪಕಾರವೇನು?

   **ಉತ್ತರ:–** ಜನರು ಮೇಲೆ ಹತ್ತುವುದಕ್ಕೆ ಮತ್ತು ಇಳಿಯುವುದಕ್ಕೆ ಸಹಾಯ ಮಾಡುತ್ತದೆ.

2. ಕವಯಿತ್ರಿ ತ್ರಿಶಂಕುಗಳು ಎಂದು ಯಾರನ್ನು ಕರೆದಿದ್ದಾರೆ?

   **ಉತ್ತರ:–** ಮೇಲೆ ಹತ್ತಿ ಕೆಳಗೆ ಇಳಿಯಲಾರದವರನ್ನು ತ್ರಿಶಂಕುಗಳು ಎಂದು ಕರೆದಿದ್ದಾರೆ.

3. ಏಣಿಗೆ ಬೀಳುವ ಭಯವಿಲ್ಲ ಏಕೆ?

   **ಉತ್ತರ:–** ಗಟ್ಟಿ ನೆಲದಲ್ಲಿ ಕಾಲೂರಿನಿಂದ ಏಣಿಗೆ ಬೀಳುವ ಭಯವಿಲ್ಲ.

**II. 3–4 ವಾಕ್ಯಗಳಲ್ಲಿ ಉತ್ತರಿಸಿ.**

1. ಏಣಿಯ ಸಹಾಯದಿಂದ ಮೇಲೆರಿದವರಿಗೆ ಏಣಿಯ ಉಪದೇಶವೇನು?

   **ಉತ್ತರ:–** ಮೇಲಿನ ಅಂತಸ್ತು ಶಾಶ್ವತವಲ್ಲ ಸುರಕ್ಷಿತವೂ ಅಲ್ಲ ಮೇಲೆರಿದ ಮೇಲೆ ಕೆಳಗೆ ಇಳಿಯ ಬೇಕೆಂದು ಉಪದೇಶ ಮಾಡುತ್ತದೆ.

2. ಏಣಿ ಹೇಳಿಕೊಳ್ಳುವ ಕಷ್ಟಗಳೇನು?

   **ಉತ್ತರ:–** ಆನೆ ಭಾಗ ದೇಹವನ್ನು ಹೊತ್ತು ಜನರು ನನ್ನ ಮೇಲೆ ಹೆಜ್ಜೆ ಇಟ್ಟಾಗ ನಾನು ಪಡುವ ಕಷ್ಟ ಅವರಿಗೇನುಗೊತ್ತು ಎಂದು ಹೇಳಿಕೊಳ್ಳುತ್ತದೆ.

3. ಏಣಿ ಎಂತಹವರಿಗೆ ಯಾವ ರೀತಿ ಸಹಾಯ ಮಾಡುತ್ತೇನೆಂದು ಹೇಳುತ್ತದೆ?

   **ಉತ್ತರ:–** ನಮ್ರತೆಯಿಂದ ಇರುವವರಿಗೆ ಮತ್ತು ಬೆಳೆಯ ಬಲ್ಲವರಿಗೆ ನಾನು ಎತ್ತಿ ಹಿಡಿಯುತ್ತೇನೆ ಎಂದು ಹೆಳುತ್ತದೆ.

## III. ಸಂದರ್ಭ ಸಹಿತ ವಿವರಿಸಿ.

1. **"ಇವರಿಗೆ ಭಾರ ಹೊತ್ತವರ ಕಾಳಜಿಯೇ ಇಲ್ಲ."**

   **ಉತ್ತರ:–** ಈ ಮಾತನ್ನು ಸುಕನ್ಯಾಮಾರುತಿ ಅವರು ಬರೆದಿರುವ ಏಣಿ ಎಂಬ ಪದ್ಯದಿಂದ ಆರಿಸಿದೆ. ಈ ಮಾತನ್ನು ಏಣಿಯ ಮೇಲೆ ಹೆಜ್ಜೆ ಇಟ್ಟು ಮೇಲೇರಿದಾಗ ನನಗೆ ಎಷ್ಟು ಕಷ್ಟವಾಗುತ್ತೇ ಎಂದು ತನ್ನ ಕಷ್ಟಗಳನ್ನು ಹೇಳಿಕೊಳ್ಳುವಾಗ ಈ ಮಾತನ್ನು ಏಣಿ ಹೇಳುತ್ತದೆ.

2. **"ನಮ್ರತೆಗೆ ನಾ ಕರುಗುತ್ತೇನೆ."**

   **ಉತ್ತರ:–** ಈ ಮಾತನ್ನು ಸುಕನ್ಯಾಮಾರುತಿ ಅವರು ಬರೆದಿರುವ ಏಣಿ ಎಂಬ ಪದ್ಯದಿಂದ ಆರಿಸಿದೆ. ಏಣಿ ತಾನು ಎಂತಹವರಿಗೆ ಸಹಾಯ ಮಾಡುತ್ತೇನೆಂದು ಹೇಳುವಾಗ ಈ ಮಾತನ್ನು ಹೇಳುತ್ತದೆ.

# ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕೋಲಾರ

## ಪದ್ಯಭಾಗ

## ಬೋಧಿ ವೃಕ್ಷದ ಹಾಡು

## ದ್ವಿತೀಯಾ ಭಾಷೆ ಕನ್ನಡ

**I. ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ಸಿದ್ದಾರ್ಥಬುದ್ದನಾದ ಪರಿಯನ್ನು ಕವಿ ಎಂತಹ ಕಥೆಯೆಂದು ಬಣ್ಣಿಸಿದ್ದಾರೆ?

   **ಉತ್ತರ:–** ಯುದ್ದ ಬಿಟ್ಟು ಪ್ರೀತಿ ಕೊಟ್ಟ ಕೇಥೆಯೆಂದು ಬಣ್ಣಿಸಿದ್ದಾರೆ.

2. ಸಿದ್ದಾರ್ಥ ಯಾರ ಹಾಗೂ ಯಾವುದರ ಮೋಹವನ್ನು ತೊರೆದ?

   **ಉತ್ತರ:–**ಮಡದಿ, ಮಗುವು ಮತ್ತು ಅರಮನೆಯ ಮೊಹವನ್ನು ತೊರೆದ.

3. ಕಾಡನ್ನು ಅಲೆದ ಸಿದ್ದಾರ್ಥನಿಗೆ ಹೊಳೆದುದ್ದೇನು?

   **ಉತ್ತರ:–** ಕಾಡನ್ನು ಅಲೆದ ಸಿದ್ದಾರ್ಥನಿಗೆ ನಾಡಿನ ಅರ್ಥ ಹೊಳೆಯಿತು.

4. ಸಿದ್ದಾರ್ಥನು ಕಂಡುಕೊಂಡು ಬದುಕಿನ ಗೂಡಾರ್ಥವೇನು?

**ಉತ್ತರ:–** ತಪ್ಪಸ್ಸಿಗಿಂತ ಜೀವನ ಪ್ರೀತಿ ದೊಡ್ಡದೆಂದು ಬದುಕಿನ ಗೂಡಾರ್ಥವನ್ನು ತಿಳಿದುಕೊಂಡನು.

5. ಬೋದಿವೃಕ್ಷದ ಹಾಡು ಯಾರ ಜೀವನವನ್ನು ಕುರಿತು ತಿಳಿಸುತ್ತದೆ?

   **ಉತ್ತರ:–** ಬುದ್ದನನ್ನು ಕುರಿತು ತಿಳಿಸುತ್ತದೆ.

**II. 3–4 ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ಸಿದ್ದಾರ್ಥ ಬುದ್ದನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿಕೊಂಡಿತು?

   **ಉತ್ತರ:–** ಕಾಡಿನ ತುಂಬಾ ಪ್ರೀತಿ ಹೊಳೆ ಹರಿಯುತ್ತಿತ್ತು, ಗೂಡಿನಲ್ಲಿ ಮರಿಗಳು ಹುಟ್ಟಿ ಚಿಲಿಪಿಲಿ ಗೂಟ್ಟಿತು, ದುಂಬಿಗಳು ಮಕರಂದವನ್ನು ಹೀರ ತೊಡಗಿದವು, ಗಿಡ ಗಿಡವು ಅಪ್ಪಿಕೊಂಡಂತೆ ಕುಣಿದಂತೆ ಕಂಡಿತು.

# ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕೋಲಾರ

## ಸದ್ದುಮಾಡದಿರು

### ದ್ವಿತೀಯಾ ಭಾಷೆ ಕನ್ನಡ

**I. ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.**

1. ತಿಮಿರಕ್ಕೆ ವೈರಿ ಯಾರು?

   **ಉತ್ತರ:–** ತಿಮಿರಕ್ಕೆ ವೈರಿ ದೀಪ (ಬೆಳಕು)

2. ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸ ಬೇಕೆಂದು ಕವಿ ಹೇಳಿದ್ದಾರೆ?

   **ಉತ್ತರ:–** ನಮ್ಮ ಕರ್ತವ್ಯಗಳನ್ನು ಶಾಂತಿಯಿಂದ ಮುಗಿಸ ಬೇಕೆಂದು ಕವಿ ಹೇಳಿದ್ದಾರೆ.

**II. 3–4 ವಾಕ್ಯಗಳಲ್ಲಿ ಉತ್ತರಿಸಿ.**

1. ಸದ್ದು ಮಾಡದೆ ಬದುಕ ಬೇಕು ಎಂಬುದಕ್ಕೆ ಕವಿ ನೀಡುವ ಹೋಲಿಕೆಗಳಾವುವು?

   **ಉತ್ತರ:–** ಕರ್ಪೂರ ಪಟ್ಟೆಯಲ್ಲಿ ಶಾಂತಿಯಿಂದ ಉರಿಯುವಂತ ಮತ್ತು ಕತ್ತಲಲ್ಲಿ ದೀಪ ಹೇಗೆ ಬೆಳಕನ್ನು ನೀಡುತ್ತೋ ಹಾಗೆ ನಾವು ಶಾಂತಿಯಿಂದ ಬದುಕಬೇಕೆಂದು ಹೇಳಿದ್ದಾರೆ.

2. ಮಾನವನ ಬದುಕ ಕರ್ಪೂರದಂತೆ ಇರಬೇಕು ಏಕೆ?

   **ಉತ್ತರ:–** ಕರ್ಪೂರ ತಟ್ಟೆಯಲ್ಲಿ ಉರಿಯುವಾಗ ಹೇಗೆ ಶಾಂತಿಯಿಂದ ಉರಿದು ತನ್ನಷ್ಟಕ್ಕೆ ತಾನು ಮಾಯವಾಗುತ್ತದೆ ಅದರಂತೆ ಬದುಕಿನಲ್ಲಿ ನಾವು ಕೂಡ ಹಾರಾಡಿ, ಕೂಗಾಡದೆ ಜೀವನವನ್ನು ನಡೆಸಬೇಕೆಂದು ಹೇಳುತ್ತಾರೆ.

**III. 8–10 ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ಸದ್ದು ಮಾಡದಿರು– ಕವಿತೆ ನೀಡುವ ಸಂದೇಶವೇನು?

   **ಉತ್ತರ:–** ನಮ್ಮ ಬಾಳಿನಲ್ಲಿ ನಾವು ಬದುಕುವಾಗ ಶಾಂತಿಯಿಂದ ಬದಕಬೇಕು.

   - ಕರ್ಪೂರ ತಟ್ಟೆಯಲ್ಲಿ ಉರಿಯುವಂತೆ ಬಾಳಬೇಕು. ದೀಪದ ಬೆಳಿಕಿಗೆ ಕತ್ತಲ ಸರಿಯುವಂತೆ ಬಾಳಬೇಕು.
   - ಹಸಿಸೌದೆ ತರಹ ಜೀವನದಲ್ಲಿ ಬುಸುಗುಟ್ಟಾಬಾರದು. ಸಿಡಿ ಮದ್ದಿನಂತೆ ಅಬ್ಬರಿಸಬಾರದು.
   - ಸಿಡುಕು ಮಿಡನ್ನು ತೊರೆದು ಬಾಳಬೇಕು.

# ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕೋಲಾರ

# ಗುರಿ

## ದ್ವಿತೀಯಾ ಭಾಷೆ ಕನ್ನಡ

**I. ಒಂದೂಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

**1.** ನಮ್ಮ ದುಡಿಮೆಯ ಹೂವು ಫಲಿಸುವುದು ಯಾವಾಗ?

**ಉತ್ತರ:–** ಕಷ್ಟಪಟ್ಟು ಒಂದೇ ಗುರಿಯಿಟ್ಟು ದುಡಿದಾಗ ನಮ್ಮ ದುಡಿಮೆಯ ಹೂವು ಫಲಿಸುತ್ತದೆ.

**2.** ಅಡಿಗರ ಪ್ರಕಾರ ಪೌರುಷದ ಬಾಳ್ವೆ ಯಾವುದು?

**ಉತ್ತರ:–** ನಾವು ಹಿಡಿದ ಒಳ್ಳೆಯ ದಾರಿಯಲ್ಲಿ ಕೊನೆಯವರಿಗೂ ನಡೆದಾಗ ಪೌರುಷದ ಬಾಳ್ವೆಯಾಗುವುದು.

**3.** ಕವಿ ಹಗಲಿರುಳು ಯಾವುದಕ್ಕೆ ಹೋರಾಡ ಬೇಕೆಂದು ಹೇಳುತ್ತಾರೆ?

**ಉತ್ತರ:–** ಒಂದೇ ಹೆಗ್ಗುರಿಗೆ ಹಗಲಿರುಳು ಹೋರಾಡ ಬೇಕು.

**II. 3–4 ವಾಕ್ಯದಲ್ಲಿ ಉತ್ತರ ಬರೆಯಿರಿ.**

1. ಜೀವನದಲ್ಲಿ ಒಂದೇ ಹೆಗ್ಗುರಿ ಇರಬೇಕು ಎಂಬುವುದಕ್ಕೆ ಅಡಿಗರು ಕೊಟ್ಟ ನಿರ್ದೇರ್ಶನಗಳಾವುವು?

**ಉತ್ತರ:–** ಒಂದು ಬಾಣಕ್ಕೆ ಒಂದೇ ಗುರಿಯಿರುವಂತೆ, ಒಂದು ದೇಹಕ್ಕೆ ಒಂದೇ ಆತ್ಮವಿರುವಂತೆ, ನಮ್ಮ ಜೀವನಕ್ಕೆ ಒಂದೇ ಗುರಿ ಇರಬೇಕು ಎಂದು ಹೇಳುತ್ತಾರೆ.

2. ನಮ್ಮ ಬದುಕು ಕೆಸರಿನ ಕಮಲದಂತಿರ ಬೇಕು ಏಕೆ?

**ಉತ್ತರ:–** ಕಮಲ ಕೆಸರಲ್ಲಿದ್ದರು ಹೇಗೆ ಕೆಳಗೆ ಕೆಸರನ್ನು ನೋಡದೆ ಆಕಾಶದಲ್ಲಿರುವ ಸೂರ್ಯನನ್ನೆ ನೋಡುತ್ತೊ ಹಾಗೆ ನಾವು ಸಹ ನಮ್ಮ ಕಷ್ಟಗಳನ್ನು ನೋಡದೆ ಒಳ್ಳೆಯ ಗುರಿಯ ಕಡೆ ನೋಡಿ ಉದ್ದಾರವಾಗ ಬೇಕು.

**III. 8–10 ವಾಕ್ಯದಲ್ಲಿ ಉತ್ತರಿಸಿ.**

1. ಗುರಿ ಪದ್ಯದ ಸಾರಾಂಶ ಬರೆಯಿರಿ.

**ಉತ್ತರ:– 1.** ಅಳಿ ಆಸೆಗಳಿಗೆ ಸಿಗದೆ ಬಾಳಬೇಕು.

2. ಕಷ್ಟ ಪಟ್ಟು ದುಡಿಯಬೇಕು, ಆಗ ತಮ್ಮ ದುಡಿಮೆ ಸಾರ್ಥಕವಾಗುತ್ತದೆ.

3. ತಾವರೆ ಹೂವಿನಂತೆ ನಮ್ಮ ಗುರಿ ಒಳ್ಳೆಯ ಕಡೆ ಉದ್ದಾರದ ಕಡೆ ಇರಬೇಕು.

4. ಹೇಡಿತನದಿಂದ ಬಾಳದೆ ದೀರತದಿಂದ ಬಾಳಬೇಕು.

5. ಒಳ್ಳೆಯ ದಾರಿಯಲ್ಲಿ ನಡೆದು ನಮ್ಮ ಗುರಿ ಸಾರ್ಥಕರೀಸ ಬೇಕು.

6. ಒಂದು ಬಾಣಕ್ಕೆ ಒಂದೇ ಗುರಿ, ಒಂದು ದೇಹಕ್ಕೆ ಒಂದೇ ಆತ್ಮ ಇರುವಂತೆ ಹಲವು ಗುರಿಗಳನ್ನು ಹೊಂದದೆ ಒಂದೇ ಹೆಗ್ಗುರಿಗೆ ಹೋರಾಡ ಬೇಕಿದೆ.

ಮನುಷ್ಯರಲ್ಲಿ ಭಗವಂತನನ್ನು ಕಾಣಬೇಕು ಈ ಭೂಮಿಉಲ್ಲಿಯೇ ಸ್ವರ್ಗ ಸುಖಪಡಬೇಕು, ಪರೋಪಕಾರವನ್ನು ಮೈ ಗೂಡಿಸಿಕೊಳ್ಳಬೇಕು, ಕೆಟ್ಟದನ್ನು ನೊಡಬೇಡ.

## IV. ಸಂದರ್ಭ ಸಹಿತ ವಿವರಿಸಿ.

1. 'ಒಂದು ಜೀವನಕೇಕೆ ಹಲವು ಸಾಧ್ಯಗಳು"

**ಉತ್ತರ:–** ಈ ವಾಕ್ಯವನ್ನು ಅಡಿಗರು ಬರೆದಿರುವ 'ಗುರಿ' ಎಂಬ ಪದ್ಯದಿಂದ ಆರಿಸಿದೆ.
ಮನುಷ್ಯರಾದ ನಾವುಗಳು ಒಂದು ಗುರಿಯನ್ನು ಇಟ್ಟುಕೊಂಡು ಬದಕಬೇಕು ಅದು ಹೇಗೆಂದರೆ ಒಂದು ಬಾಣಕ್ಕೆ ಒಂದೇ ಗುರಿ, ಒಂದು ದೇಹಕ್ಕೆ ಒಂದೇ ಆತ್ಮ ಇರುವಂತೆ ನಮ್ಮ ಗುರಿ ಒಂದೇ ಇರಬೇಕು ಎನ್ನುವಾಗ ಕವಿ ಹೇಳಿದ್ದಾರೆ.

# ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕೋಲಾರ

## ಮೂಡಲ್ ಕುಣಿಗಲ್ ಕೆರೆ

### ದ್ವಿತೀಯಾ ಭಾಷೆ ಕನ್ನಡ

**I. ಒಂದೂಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

1. ಕುಣಿಗಲ್ ಕೆರೆ ಯಾವ ದಿಕ್ಕಿನಲ್ಲಿದೆ?

   **ಉತ್ತರ:–** ಪೂರ್ವ ದಿಕ್ಕಿನಲ್ಲಿದೆ.

2. ಕುಣಿಗಲ್ ಕೆರೆ ಹೇಗೆ ಬಾಗಿದೆ?

   **ಉತ್ತರ:–** ಬಾಳೆಯ ಹಣ್ಣಿನಂತೆ ಬಾಗಿದೆ.

3. ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಲಾಗಿದೆ?

   **ಉತ್ತರ:–** ನಿಂಬೆಯ ಹಣ್ಣಿಗೆ ಹೋಲಿಸಲಾಗಿದೆ.

4. ಕುಣಿಗಲ್ ಕೆರೆಯುನ್ನು ನೋಡಲು ಯಾರು ಬಂದರು?

   **ಉತ್ತರ:–** ಶಿವನೆ ಕುಣಿಗಲ್ ಕೆರೆಯನ್ನು ನೋಡಲು ಬಂದ.

5. ಕೆರೆಯಲ್ಲಿ ಯಾವ ಮೀನುಗಳಿದ್ದವು?

   **ಉತ್ತರ:–** ಬಾಳೆ ಮೀನುಗಳು ಕೆರೆಯಲ್ಲಿದ್ದವು.

**II. 3–4 ವಾಕ್ಯದಲ್ಲಿ ಉತ್ತರಿಸಿ.**

1. ಕಬ್ಬಕ್ಕಿಗಳು ಯಾವಾಗ ಬಯಿ ಬಿಡುತ್ತವೆ?

   **ಉತ್ತರ:–** ಶಿವ ಕೆರೆಯನ್ನು ನೋಡಲು ಬಂದಾಗ ಅದೇ ಸಮಯಕ್ಕೆ ಕೆರೆಯಲ್ಲಿ ಮೀನುಗಳನ್ನು ತಿನ್ನಲು ಕಬ್ಬಕ್ಕಿಗಳು ಬಾಯನ್ನು ಬಿಡುತ್ತವೆ.

2. ಬಾಳೆ ಮೀನುಗಳು ಬೊಬ್ಬೆ ಹೊಡೆಯಲು ಕರಣವೇನು?

   **ಉತ್ತರ:–** ಮೀನುಗಾರರು ಮೀನು ಹಿಡಿಯಲು ಕೆರೆಯಲ್ಲಿ ದೋಣಿ ನಡೆಸುತ್ತಿರುವಾಗ ಹುಟ್ಟುಹಾಕುವಾಗ ಕೆರೆಯಲ್ಲಿನ ಮೀನುಗಳು ಈ ಕಡೆಯಿಂದ ಆ ಕಡೆಗೆ ಬೊಬ್ಬೆ ಹೊಡೆಯುತ್ತವೆ.

# ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕೋಲಾರ

## ವಚನಗಳು

## ದ್ವಿತೀಯಾ ಭಾಷೆ ಕನ್ನಡ

**I. ಒಂದೂಂದು ವಾಕ್ಯದಲ್ಲಿ ಉತ್ತರಿಸಿ.**

1. ಬಸವಣ್ಣ ನವರು ಜನರ ಯಾವ ಧಾರ್ಮಿಕ ನಂಬಿಕೆಗಳನ್ನು ಖಂಡಿಸಿದ್ದಾರೆ?

   **ಉತ್ತರ:–** ಮರವನ್ನು ಸುತ್ತುವುದು ಮತ್ತು ನೀರಲ್ಲಿ ಮುಗುವುದನ್ನು ಖಂಡಿಸಿದ್ದಾರೆ.

2. ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಹೇಗಿರ ಬೇಕೆಂದು ಸಿದ್ದರಾಮ ಹೇಳುತ್ತಾರೆ?

   **ಉತ್ತರ:–** ವೇಷದಂತೆ ಆಚರಣೆಯು ಇರಬೇಕೆಂದು ಹೇಳುತ್ತಾರೆ.

3. ಕೆರೆಗಳು ನಿಷ್ಪ್ರಯೋಜಕ ಆಗುವುದು ಯಾವಾಗ?

   **ಉತ್ತರ:–** ನೀರು ಬಾರದೆ ಇದ್ದಾಗ ಕೆರೆಗಳು ನಿಷ್ಪ್ರಯೋಜನಕವಾಗುತ್ತದೆ.

4. ಧನವಿದವರಲ್ಲಿ ಇರಬೇಕಾದ ಗುಣ ಯಾವುದು?

   **ಉತ್ತರ:–** ಧನವಿದ್ದವರಲ್ಲಿ ಇರಬೇಕಾದ ಗುಣ ದಯೆ.

5. ಅಕ್ಕಮಹಾದೇವಿಯು ತನ್ನ ಬದುಕು ಯಾವಾಗ ಫಲದಾಯಕ ಆಗುತ್ತದೆಂದು ಹೇಳಿದ್ದಾಳೆ?

   **ಉತ್ತರ:–** ಚನ್ನಮಲ್ಲಿಕಾರ್ಜುನನ್ನು ನೆನೆದಾಗ ತನ್ನ ಬದುಕು ಸಾರ್ಥಕವಾಗುತ್ತದೆ.

**II. 3–4 ವಾಕ್ಯಗಳಲ್ಲಿ ಉತ್ತರಿಸಿ.**

1. ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ?

   **ಉತ್ತರ:–** ಜನರು ನೀರಲ್ಲಿ ಮುಳುಗಿ ದೇವರಿಗೆ ತನ್ನ ಭಕ್ತಿ ತೋರಿಸುತ್ತಾರೆ, ಅದೇ ರೀತಿ ಮರವನ್ನು ಭಕ್ತಿಯಿಂದ ಸುತ್ತಿ ಭಕ್ತಿ ತೋರಿಸುತ್ತಾರೆ. ಆದರೆ ಜಲವು ಬತ್ತುತ್ತೆ ಮರವು ಒಣಗುತ್ತೆ ಅಂತಹವುಗಳನ್ನು ಪೂಜಿಸುವುದರಿಂದ ಫಲವಿಲ್ಲ ಎಂದು ಖಂಡಿಸುತ್ತಾರೆ.

**III. ಸಂದರ್ಭದೊಡನೆ ವಿವರಿಸಿ.**

1. "ನೀರ ಕಂಡಲ್ಲಿ ಮುಳುಗುವರಯ್ಯ"

   **ಉತ್ತರ:–** ಈ ಮಾತನ್ನು ಬಸವಣ್ಣನವರು ಬರೆದ ವಚನಗಳು ಎಂಬ ಪದ್ಯದಿಂದ ಆರಿಸಿದೆ. ನೀರಲ್ಲಿ ಮುಳುಗುವುದನ್ನು ಮತ್ತು ಮರವನ್ನು ಸುತ್ತುವುದನ್ನು ಖಂಡಿಸುತ್ತಾ ಈ ಮಾತನ್ನು ಹೇಳಿದ್ದಾರೆ.

# ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕೋಲಾರ

## ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ

### ದ್ವಿತೀಯಾ ಭಾಷೆ ಕನ್ನಡ

**I. ಒಂದೂಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಕೌರವನ ಸೇನೆಯ ಉತ್ತರನಿಗೆ ಹೇಗೆ ಕಾಣಿಸಿತು?

   **ಉತ್ತರ:–** ಕಡಲಿನ ತರಹ ಕಂಡುತು.

2. ಧುರಕ್ಕೆ ಬೆನ್ನು ಹಾಕಿದರೆ ಏನು ಪ್ರಾಪ್ತಿಯಾಗುತ್ತದೆ?

   **ಉತ್ತರ:–** ನರಕ ಪ್ರಾಪ್ತಿಯಾಗುತ್ತೆ.

3. ಅರ್ಜುನನ್ನು ಯಾರನ್ನು ನಾಡ ನರಿ ಎಂದು ಕರೆದಿದ್ದಾನೆ?

   **ಉತ್ತರ:–** ಅರ್ಜುನನು ಉತ್ತರ ಕುಮಾರನನ್ನು ನಾಡ ನರಿ ಎಂದಿದ್ದಾನೆ.

4. ಸುರರ ಸತಿಯರ ಸ್ಥಾನವನ್ನು ಯಾರು ತುಂಬುತ್ತಾರೆ?

   **ಉತ್ತರ:–** ಸುರರ ಸತಿಯರ ಸ್ಥಾನವನ್ನು ಅರಮನೆಯ ದಾಸಿಯರು ತುಂಬುತ್ತಾರೆ.

**II. 3–4 ವಾಕ್ಯಗಳಲ್ಲಿ ಉತ್ತರಿಸಿ.**

1. ಶತ್ರು 'ನಮೋ' ಎಂದು ಉತ್ತರನು ಏಕೆ ಹೇಳಿದನು?

   **ಉತ್ತರ:–** ಕೌರವರ ಸೈನ್ಯವು ಉತ್ತರದ ಕಣ್ಣಿಗೆ ಕಡಲಿನ ತರಹ ಕಾಣಿಸುವುದರಿಂದ ಭಯ ಪಟ್ಟು ಶತ್ರು ಬಲಕ್ಕೆ 'ನಮೋ' ಎನ್ನುತ್ತಾನೆ.

2. ಒಡಲು ಒಡೆಯುವಂತೆ ಅರ್ಜುನನು ನಗಲು ಕಾರಣವೇನು?

   **ಉತ್ತರ:–** ಕೌರವವ ಸೈನ್ಯವನ್ನು ನೋಡಿ ಭಯಪಟ್ಟು ಈ ಸೈನ್ಯವನ್ನು ಎದುರಿಸಲು ಶಿವನಿಗೆ ಸಾಧ್ಯ ಎಂದು ರಥದಿಂದ ಇಳಿದು ಓಡಿಹೋಗುತ್ತಾನೆ ಇದನ್ನು ಕಂಡ ಅರ್ಜುನನು ನಗುತ್ತಾನೆ.

3. **"**ಕಾದು ನಡೆ**"** ಎಂದು ಅರ್ಜುನನು ಉತ್ತರವನ್ನು ಏಕೆ ಒತ್ತಾಯಿಸಿದನು?

   **ಉತ್ತರ:–** ಸೈನ್ಯವನ್ನು ಕಂಡು ಓಡಿ ಹೋಗುತ್ತಿರುವ ಉತ್ತರನನ್ನು ಕಂಡ ಅರ್ಜುನನು ಉತ್ತರ ಕುಮಾರ ಅರಮನೆಯ ಹೆಂಗಸರ ಮುಂದೆ ಜಂಭ ಕೊಚ್ಚಿದೆ ಆದರೆ ಈಗೇನಾಯ್ತು ನಾಡ ನರಿ ತರಹ ಓಡುತ್ತರಿಯ, ನಿಲ್ಲು ಯೋಚಿಸಿ ಎಂದು ಹೇಳುತ್ತಾನೆ.

**III. ಸಂದರ್ಭ ಸಹಿತ ವಿವರಿಸಿ.**

1. **"**ಶಿವ ಶಿವ ಕಾಡಿಗೆಲಿದೆವು**"**

**ಉತ್ತರ:–** ಈ ವಾಕ್ಯವನ್ನು ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ ಎಂಬ ಪದ್ಯದಿಂದ ಆರಿಸಿದೆ ಬರೆದ ಕವಿ ಕುಮಾರವಾಯಸರು.

ಕೌರವ ಸೈನ್ಯ ನೋಡಿ ಓಡಿ ಹೋಗುವ ಸಂದರ್ಭದಲ್ಲಿ ಈ ಸೈನ್ಯವನ್ನು ಶಿವನೆ ಹೋರಾಟ ಮಾಡಿ ಗೆಲ್ಲಬೇಕು ಎಂದು ಹೇಳುತ್ತಾನೆ ಉತ್ತರ.

2. **"**ಎಮ್ಮರಮನೆಯ ನಾರಿಯರೆ ಸಾಕು.**"**

**ಉತ್ತರ:–** ಈ ವಾಕ್ಯವನ್ನು ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ ಎಂಬ ಪದ್ಯದಿಂದ ಆರಿಸಿದೆ ಬರೆದ ಕವಿ ಕುಮಾರವಾಯಸರು.

ಯುದ್ದ ಭೂಮಿಯಿಂದ ಓಡುತ್ತಿರುವಾಗ ಅರ್ಜುನನು ಈ ರೀತಿಯಾಗಿ ಓಡಬೇಡ ನರಕ ದೊರೆಯುತ್ತದೆ ಎಂದು ತಿಳಿಹೇಳುತ್ತಾನೆ ಆಗ ಉತ್ತರನು ಈ ಮಾತನ್ನು ಆರ್ಜುನನಿಗೆ ಹೇಳುತ್ತಾನೆ.

# ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ

# ಕಳ್ಳರ ಗುರು

## ದ್ವಿತೀಯಾ ಭಾಷೆ ಕನ್ನಡ

**I.**

1. ವೈದ್ಯರು ತನ್ನ ವ್ಯಕ್ತಿಯ ಬಗ್ಗೆ ಹೆಂಡತಿ ರತ್ನಳಿಗೆ ಏನು ಹೇಳಿದರು?

   **ಉತ್ತರ:–** ವೈದ್ಯ ವೃತ್ತಿ ಸಮಾಜದ ಕ್ಷೇಮ ಸಾಧನೆಗಾಗಿ ಇರುವುದು, ನಾವು ಬದುಕಿರುವ ಮಟ್ಟಿಗೆ ಏನಾದರೂ ದೊರೆತರೆ ಸಾಕು ಎನ್ನುತ್ತಾರೆ.

2. ಹಾವನ್ನು ಕಂಡ ವೈದ್ಯರ ತಲೆಯಲ್ಲಿ ಯಾವ ವಿಚಾರಗಳು ಮೂಡಿ ಬಂದವು?

   **ಉತ್ತರ:–** ಹಾವಿನಂತೆ ದುಷ್ಟ ಜಂತು ಕೆಣಕದೆ ಯಾರನ್ನು ಹಿಂಸಿಸದು, ಆದರೆ ಮನುಷ್ಯ ಕೆಣಕದಿದ್ದರೂ ಎಲ್ಲರನ್ನು ಕಡಿಯುತ್ತಾನೆ, ಎಂಬ ವಿಚಾರ ಬಂದವು.

3. ಭೀಮನಾಯಕನು ವೈದ್ಯರಿಗೆ ಏನೆಂದು ಕೃತಜ್ಞತೆಯನ್ನು ಸಲ್ಲಿಸಿದನು?

   **ಉತ್ತರ:–** ಕಾಣದ ದೇವರು ಇದ್ದಾನೋ ಇಲ್ಲವೋ, ನೀವು ಮಾತ್ರ ನನ್ನ ಕಣ್ಣಿಗೆ ಕಾಣುವ ದೇವರು ಎಂದು ಕಾಲಿಗೆ ಅಡ್ಡ ಬೀಳುತ್ತಾನೆ.

4. ವೈದ್ಯರ ಯಾವ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು?

   **ಉತ್ತರ:–** ಕಾಯುವುದು ದೇವರ ಕೆಲಸ, ಕೊಲ್ಲುವುದು ರಾಕ್ಷಸರ ಕೆಲಸ, ಈ ಮಾತುಗಳು ಭೀಮನಾಯಕನನ್ನು ಚುಚ್ಚಿದವು.

5. ಭೀಮನಾಯಕನು ವೈದ್ಯರ ವಸ್ತುಗಳನ್ನು ಹಿಂತಿರುಗಿಸಿ ಏನೆಂದು ಹೇಳಿದನು?

   **ಉತ್ತರ:–** ದೇವರ ಒಡವೆಗಳನ್ನು ದೇವರಿಗೆ ಒಪ್ಪಿಸಲು ಬಂದಿದ್ದೇನೆ, ನನ್ನನ್ನು ಕ್ಷಮಿಸಿ ದಯವಿಟ್ಟು ಎಲ್ಲವನ್ನು ಒಪ್ಪಿಸಿಕೊಳ್ಳಬೇಕು.